# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1832 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಲೆನಾಡು ಭಾಗದ ಜನರು ಪ್ರಮುಖವಾಗಿ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿದ್ದ ಕಾಡು ಪ್ರಾಣಿಗಳ ವಸ್ತುಗಳನ್ನು ಇಲಾಖೆಗೆ ಹಸ್ತಾಂತರಿಸುವಂತೆ ಹೊರಡಿಸಿರುವ ಆದೇಶವನ್ನು ಮಲೆನಾಡು ಭಾಗದ ಜನರು ವಿರೋಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು; (ಸಂಪೂರ್ಣ ವಿವರ ನೀಡುವುದು) | ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿದ್ದ ವನ್ಯ ಪ್ರಾಣಿಗಳ ವಸ್ತುಗಳನ್ನು ಇಲಾಖೆಗೆ ಹಸ್ತಾಂತರಿಸುವಂತೆ ಹೊರಡಿಸಿರುವ ಆದೇಶಕ್ಕೆ ಸಂಬಂಧಿಸಿದಂತೆ ವಿವರ ಈ ಕೆಳಕಂಡಂತಿದೆ.<br><br>• ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ. 103.ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 64 ರನ್ವಯ ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರದನ್ವಯ ವನ್ಯಜೀವಿ ಅಂಗಾಂಗ ಮತ್ತು ಟ್ರೋಫಿಗಳ ಘೋಷಣೆಗಳನ್ನು ಮಾಡಿಕೊಂಡಿರದ ಜನರಿಗೆ ರಾಜ್ಯ ಸರ್ಕಾರದ ಆಸ್ತಿಯಾಗಿರುವ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು 90 ದಿನಗಳ ಅವಕಾಶವನ್ನು ಒದಗಿಸಲಾಗಿತ್ತು.<br>• ಸದರಿ ನಿಗದಿಪಡಿಸಿದ ಅವಧಿಯಲ್ಲಿ ರಾಜ್ಯದಲ್ಲಿ ವಿವಿಧ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಹೊಂದಿದ್ದ 192 ಜನರು 705 ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಿರುತ್ತಾರೆ. (ವಿವರಗಳನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ).<br><br>ಮುಂದುವರೆದು, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 103 ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 8380/2024 (connected 5199/2024) ದಾಖಲಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಪ್ರಸ್ತುತ ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳಲು ಅವಕಾಶ ಇರುವುದಿಲ್ಲ. |
| ಆ) | ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರನ್ನು ಗಮನದಲ್ಲಿಟ್ಟುಕೊಂಡು ಸದರಿ ಆದೇಶವನ್ನು ತಿದ್ದುಪಡಿ ಮಾಡಿ ವಿನಾಯಿತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸುವ ಕುರಿತಂತೆ ಕಾನೂನನ್ನು ರೂಪಿಸಲು ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972 ರಲ್ಲಿ ತಿದ್ದುಪಡಿಯನ್ನು ತರಬೇಕಾಗುತ್ತದೆ ಹಾಗು ಇದು ಕೇಂದ್ರ ಸರ್ಕಾರದ ಕಾಯಿದೆ ಆಗಿದ್ದು, ಸದರಿ ಕಾಯಿದೆಗೆ ತಿದ್ದುಪಡಿ ಮಾಡುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಹಾಗು ರಾಜ್ಯ ಸರ್ಕಾರಕ್ಕೆ ಈ ಕುರಿತಂತೆ ಯಾವುದೇ ಅಧಿಕಾರ ಇರುವುದಿಲ್ಲ. |

ಸಂಖ್ಯೆ: ಅಪಜೀ 106 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## ಅನುಬಂಧ-01

**ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ. 103 ಎಫ್‌ಡಬ್ಲ್ಯೂಎಲ್ 2023, ದಿನಾಂಕ: 10.01.2024 ರಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 64 ರನ್ವಯ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕೆ ಅಧ್ಯರ್ಪಿಸಿರುವ ಕುರಿತಾದ ವಿವರಗಳು:**

| ವಿಭಾಗಗಳು | ಅರ್ಜಿಗಳ ಸಂಖ್ಯೆ | ಟ್ರೋಫಿಗಳ ಸಂಖ್ಯೆ |
|---|---|---|
| ಬೆಂಗಳೂರು ನಗರ | 110 | 385 |
| ಶಿರಸಿ | 13 | 87 |
| ಚಿತ್ರದುರ್ಗ | 3 | 36 |
| ಧಾರವಾಡ | 8 | 29 |
| ಹಳಿಯಾಳ | 5 | 29 |
| ಶಿವಮೊಗ್ಗ | 9 | 27 |
| ಶಿವಮೊಗ್ಗ ವಜೀ | 6 | 15 |
| ಮೈಸೂರು (ಪ್ರಾ) | 5 | 10 |
| ಬೆಳಗಾವಿ | 5 | 20 |
| ಹಾಸನ | 6 | 16 |
| ತುಮಕೂರು | 4 | 11 |
| ಹೊನ್ನಾವರ | 4 | 10 |
| ಬಾಗಲಕೋಟೆ | 1 | 7 |
| ಬನ್ನೇರುಘಟ್ಟ ರಾ.ಉ. | 2 | 6 |
| ಹುಣಸೂರು | 3 | 5 |
| ಮಂಗಳೂರು | 3 | 4 |
| ಕಾರವಾರ | 1 | 2 |
| ಚಿಕ್ಕಮಗಳೂರು | 1 | 2 |
| ಭದ್ರಾ ವಜೀ | 1 | 2 |
| ಗೋಕಾಕ್ | 1 | 1 |
| ಹಾವೇರಿ | 1 | 1 |
| **ಒಟ್ಟು** | **192** | **705** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.